**Q.P. Code – 50348**

**ತೃತೀಯ ಬಿ.ಎ. ಪದವಿ ಪರೀಕ್ಷೆ**

**ಅಕ್ಟೋಬರ್/ನವೆಂಬರ್ 2014**

**(ಅಂಚೆ ಮತ್ತು ತೆರಪಿನ ಶಿಕ್ಷಣ)**

**ಬಸವ ತತ್ವ**

**(DAC 530) ಪತ್ರಿಕೆ 3 – ಕರಣ ಹಸಿಗೆ**

**(ಹೊಸಬರಿಗೆ/ಹಳಬರಿಗೆ)**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 70/80*

ವಿಭಾಗ – ಎ

1. ಯಾವುದಾದರೂ **ಎರಡು** ವಚನಗಳನ್ನು ವಿಶ್ಲೇಷಿಸಿ : **2 × 5 = 10**

(ಅ) ಛಲಬೇಕು ಶರಣಂಗೆ। ಪರಧನವನೊಲ್ಲೆನೆಂಬ
ಛಲಬೇಕು ಶರಣಂಗೆ। ಪರಸತಿಯನೊಲ್ಲೆನೆಂಬ
ಛಲಬೇಕು ಶರಣಂಗೆ। ಪರದೈವನೊಲ್ಲೆನೆಂಬ
ಛಲಬೇಕು ಶರಣಂಗೆ। ಲಿಂಗ ಜಂಗಮ ಒಂದೆ ಎಂಬ
ಛಲಬೇಕು ಶರಣಂಗೆ। ಪ್ರಸಾದ ದಿಡ ವೆಂಬ
ಛಲವಿಲ್ಲದವರ ಮೆಚ್ಚನಮ್ಮ ಕೂಡಲ ಸಂಗಮದೇವ

(ಆ) ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು
ನಡೆಯಿಲ್ಲದ ನುಡಿ ಅರಿವಿಂಗೆ ಹಾನಿ
ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿ ಇಲ್ಲದ ಶೃಂಗಾರ
ಧೃಡವಿಲ್ಲದ ಭಕ್ತಿ. ಅಡಿ ಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವ ಮುಟ್ಟದ ಭಕ್ತಿ

(ಇ) ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದೈತೆ
ವಿಷವೇರಿತ್ತಯ್ಯ ಆಪಾದ ಮಸ್ತಕಕ್ಕೆ
ಹಸಿವಿಗನ್ನವನಿಕ್ಕೆ ವಿಷವ ನಿಳುಹ ಬಲ್ಲಡೆ
ವಸುಧೆಯೊಳಗಾತನೇ ಗಾರುಡಿಗ ಕಾಣ ರಾಮನಾಥ

ವಿಭಾಗ – ಬಿ

2. ಯಾವುದಾದರೂ **ನಾಲ್ಕಕ್ಕೆ** ಉತ್ತರಿಸಿ : **4 × 10 = 40**

(ಅ) ವಚನ ಚಳುವಳಿಯು ಸಾಮಾಜಿಕ ಸಮಾನತೆಗೆ ಕೊಟ್ಟ ಕೊಡುಗೆಗಳನ್ನು ವಿವರಿಸಿ.

(ಆ) ಶರಣರ ಬದುಕಿನಲ್ಲಿರುವ ಅಸಂಗ್ರಹ ನೀತಿ ತತ್ವವನ್ನು ವಿವರಿಸಿ.

(ಇ) ಶರಣರ ಕಾಯಕದ ಕಲ್ಪನೆ ಬದುಕಿನ ಪರಿಶುದ್ಧತೆಗೆ ಹೇಗೆ ಕಾರಣವಾಗಿದೆ? ವಚನಗಳ ಸಹಿತ ವಿವರಿಸಿ.

(ಈ) ಶರಣರ ಬದುಕಿನಲ್ಲಿ 'ಶೀಲ–ನೇಮ'ಗಳ ಮಹತ್ವವನ್ನು ವಚನಗಳ ಸಹಿತ ವಿವರಿಸಿ.

(ಉ) ಶರಣರ ಚಳುವಳಿ ಸ್ತ್ರೀ ಕುಲದ ಉದ್ಧಾರಕ್ಕೆ ಹೇಗೆ ಕಾರಣವಾಗಿದೆ? ವಿವರಿಸಿ.

ವಿಭಾಗ – ಸಿ

3. ಯಾವುದಾದರೂ **ನಾಲ್ಕಕ್ಕೆ** ಟಿಪ್ಪಣಿ ಬರೆಯಿರಿ : **4 × 5 = 20**

(ಅ) ಬಸವ ಸಹಜ ಶಿವಯೋಗ

(ಆ) ಕರಣ ಹಸಿಗೆ

(ಇ) ಷಟ್ ಚಕ್ರಗಳು

(ಈ) ಪಂಚಭೂತಗಳ ಪಂಚೀ ಕೃತಿ

(ಉ) ಲಿಂಗಾಂಗ ಸಾಮರಸ್ಯ

ವಿಭಾಗ – ಡಿ

4. ವಿಶೇಷ ಸೂಚನೆ : ಹೊಸಬರು ಈ ಕೆಳಗಿನ ಪ್ರಶ್ನೆಯನ್ನು **ಕಡ್ಡಾಯವಾಗಿ** ಉತ್ತರಿಸಬೇಕು : **1 × 10 = 10**

(ಅ) ಕರಣ ಹಸಿಗೆಯ ಪರಿಕಲ್ಪನೆಯನ್ನು ವಿವರವಾಗಿ ವಿಶ್ಲೇಷಿಸಿ.

---